ಓ.ಎಸ್.ನಂ: 156-2023

ಪಿಡಬ್ಲ್ಯೂ-1

**ಸಾಕ್ಷಿಯನ್ನು ಕರೆಯಿಸಿ ದಿನಾಂಕ: 02.12.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ನನ್ನ ತಂದೆ ಹೆಸರು ಬಸಪ್ಪ. ಈ ದಾವ ಸ್ವತ್ತಿನ ಸರ್ವೇ ನಂಬರ್ ನನಗೆ ಗೊತ್ತಾಗುವುದಿಲ್ಲ. ದಾವ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ-ಶಿವಲಿಂಗಪ್ಪ ರವರ ಸ್ವತ್ತು, ಪಶ್ಚಿಮಕ್ಕೆ-ಬಸಪ್ಪರವರ ಸ್ವತ್ತು, ಉತ್ತರಕ್ಕೆ-ರಸ್ತೆ ಮತ್ತು ದಕ್ಷಿಣಕ್ಕೆ-ನಾಗಮಲ್ಲಪ್ಪರವರ ಸ್ವತ್ತು ಇದೆ. ಸರ್ವೇ ನಂ: 3 ರಲ್ಲಿ ಹಿಂದೆ ಒಟ್ಟು 2 ಎಕರೆ ವಿಸ್ತೀರ್ಣ ಇತ್ತು. ಈ ದಾವೆಯನ್ನು 10 ಗುಂಟೆಗೆ ದಾಖಲಿಸಿದ್ದೇನೆ. ಉಳಿದ ಸ್ವತ್ತನ್ನು ನನ್ನ ತಂದೆ ಯಾರಿಗೂ ಮಾರಾಟ ಮಾಡಿಲ್ಲ. ಉಳಿದ ಸ್ವತ್ತಿನ ಸರ್ವೇ ನಂ: 3/1. ದಾವ ಸ್ವತ್ತಿನ ಈಶಾನ್ಯ ದಿಕ್ಕಿಗೆ ನನ್ನ ಉಳಿದ ಸ್ವತ್ತು ಇದೆ. 4-5 ವರ್ಷಗಳ ಹಿಂದೆ ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ಹೆಸರಿಗೆ ಖಾತಾ ಆಗಿದೆ. ನನ್ನ ತಂದೆಗೆ ಒಟ್ಟು 5 ಜನ ಮಕ್ಕಳು. ನನ್ನ ತಂದೆಗೆ ಒಟ್ಟು 10 ಎಕರೆ ಜಮೀನು ಇತ್ತು. 30.01.2023 ರ ವಿಭಾಗ ಪತ್ರದಲ್ಲಿ ಕೇವಲ 10 ಗುಂಟೆಗೆ ಮಾತ್ರ ವಿಭಾಗ ಮಾಡಿಕೊಂಡಿರುತ್ತೇವೆ. ದಾವ ಸ್ವತ್ತಿನ ಈಶಾನ್ಯ ದಿಕ್ಕಿಗೆ ಇರುವ ಸ್ವತ್ತನ್ನು ನಾನೇ ಉಳುಮೆ ಮಾಡುತ್ತಿದ್ದೇನೆ.

1ನೇ ಪ್ರತಿವಾದಿಯ ತಂದೆ ಹೆಸರು ಬಸಪ್ಪ. 1ನೇ ಪ್ರತಿವಾದಿ ತಂದೆಗೆ ನನ್ನ ತಂದೆ ಸರ್ವೇ ನಂ: 3/1 ರಲ್ಲಿ 4 ಗುಂಟೆ ಜಮೀನನ್ನು ದಿ: 19.04.1971 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯದ ದಿನದಿಂದ 1ನೇ ಪ್ರತಿವಾದಿಯ ತಂದೆ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ತಂದೆ ಹೆಸರು ಲಿಂಗಪ್ಪ. 2ನೇ ಪ್ರತಿವಾದಿ ತಂದೆಗೆ ನನ್ನ ತಂದೆ ಸರ್ವೇ ನಂ: 3/1 ರಲ್ಲಿ 4 ಗುಂಟೆ ಜಮೀನನ್ನು ದಿ: 18.05.1964 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ 2ನೇ ಪ್ರತಿವಾದಿಯ ತಂದೆಯೇ ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಮೃತ ಹೊಂದಿದ ನಂತರ ಪ್ರತಿವಾದಿಗಳು ಹಕ್ಕುದಾರರಾಗಿ ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಸ್ವತ್ತನ್ನು ನಮ್ಮ ಹೆಸರಿಗೆ ಖಾತಾ ಮಾಡಿಸಿಕೊಂಡು ವಿಭಾಗ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಿಃ 30.01.2023 ರಲ್ಲಿ ಮೋಸದಿಂದ ಪ್ರತಿವಾದಿಗಳ ಸ್ವತ್ತನ್ನು ಸೇರಿಸಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಿಃ 19.04.1971 ಮತ್ತು 18.05.1964 ರ ಕ್ರಯ ಪತ್ರದಂತೆ ನನ್ನ ತಂದೆ ಪ್ರತಿವಾದಿಗಳ ತಂದೆಗೆ ದಾವ ಸ್ವತ್ತನ್ನು ಮಾರಾಟ ಮಾಡಿರುವುದರಿಂದ ನನಗೆ ದಾವ ಸ್ವತ್ತಿನಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನಕ್ಕೆ ತೊಂದರೆ ಕೊಟ್ಟ ಬಗ್ಗೆ ದೂರನ್ನು ದಾಖಲಿಸಿದ್ದೇನೆ. ದೂರಿನ ಪ್ರತಿಯನ್ನು ಹಾಜರುಪಡಿಸಿಲ್ಲ. ದಾವ ಸ್ವತ್ತಿನಲ್ಲಿ ಪ್ರತಿವಾದಿಗಳೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಕ್ರಯದಂತೆ ಖಾತಾ ಆಗದೆ ಇರುವುದನ್ನು ದುರುಪಯೋಗಪಡಿಸಿಕೊಂಡು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ